**ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ., ನ್ಯಾಯಾಲಯ,ಹೊಸದುರ್ಗ.**

ಸಿ ಸಿ ಸಂಖ್ಯೆ.**120/2018** ದಿನಾಂಕಃ**19-8-2024**

ಪಿ.ಡಬ್ಲ್ಯೂಃ**1**

ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು ಃ ಆರೋಪಿ ಪರ ಶ್ರೀ ಹೆಚ್ ಎಲ್ ಎನ್ ವಕೀಲರಿಂದ

1. ನನ್ನ ತಂದೆ ಹೆಸರು ಲಿಂಗರಾಜು ಎಂ ಬಿ. ನಾನು ಪ್ರಸ್ತುತ ಹೊಸದುರ್ಗದಲ್ಲಿ ಪಿರ್ಯಾದಿ ಸಂಘದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನನಗೆ ಆರೋಪಿಯ ಪರಿಚಯ ಇರುತ್ತದೆ. ಆರೋಪಿಯ ವಿಳಾಸ ಗೊರವಿನಕಲ್ಲು, ಜನರಲ್ ಕಾರಿಯಪ್ಪ ಸ್ಕೂಲ್ ಹತ್ತಿರ. ಇದು ಆರೋಪಿಯ ವಿಳಾಸ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಈಗ ಹೇಳಿದ ಆರೋಪಿಯ ವಿಳಾಸಕ್ಕೆ ನೋಟೀಸ್ ನೀಡಿರುತ್ತೇನೆ. ಸದರಿ ವಿಳಾಸದಲ್ಲಿ ಆರೋಪಿ ಎಂದಿಗೂ ವಾಸ ಇರಲಿಲ್ಲ ಮತ್ತು ನಾನು ನೀಡಿದ ನೋಟೀಸ್ ಆರೋಪಿಗೆ ಎಂದೂ ತಲುಪಿರುವುದಿಲ್ಲ ಎಂದರೆ ಸರಿಯಲ್ಲ.

2. ಆರೋಪಿಗೆ ಸಾಲ ಮಂಜೂರು ಮಾಡುವಾಗ ಮೇಲೆ ಹೇಳಿದ ವಿಳಾಸದಲ್ಲಿ ಇದ್ದರು. ನಾವು ಸಾಲ ನೀಡುವಾಗ ಸಾಲಗಾರರ ದಾಖಲೆಗಳನ್ನು ಅಡಮಾನ ಇಟ್ಟುಕೊಳ್ಳುತ್ತೇವೆ. ಆ ಸಮಯದಲ್ಲಿ ನಾವು ಡಿಮ್ಯಾಂಡ್ ಪ್ರಾಂಸರಿ ನೋಟು, ಕರಾರುಪತ್ರ, ಮನೆಯ ಅಸಲು ಪತ್ರ, ಖಾತಾ ಪ್ರಮಾಣಪತ್ರ ಇತ್ಯಾದಿ ಈ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಈ ದಾಖಲೆಗಳನ್ನು ಹಾಜರುಮಾಡಿಲ್ಲ ಎಂದರೆ ಸರಿಯಲ್ಲ. ಸಾಲ ಮಂಜೂರು ಮಾಡುವಾಗ ಆರೋಪಿಗೆ ಸೇರಿದ ಸಹಿಯನ್ನು ಮಾಡದ ಪೂರ್ತಿ ಖಾಲಿ ಚೆಕ್ಕನ್ನು ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಖಾಲಿ ಚೆಕ್ಕನ್ನು ನಾವೇ

ಬರೆದುಕೊಂಡು ಆರೋಪಿಯ ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಚೆಕ್ಕನ್ನು ನಾವು ದುರ್ಬಳಕೆ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

3. ಆರೋಪಿಯು ನಮ್ಮ ಬ್ಯಾಂಕಿನಲ್ಲಿ ಖಾತೆ ಹೊಂದಿರುತ್ತಾರೆ. ಆರೋಪಿಯ ಖಾತೆಯಿಂದ ನಾವು 28 ಲಕ್ಷ ರೂಪಾಯಿಗಳನ್ನು ನಮ್ಮ ಬ್ಯಾಂಕ್ ಖಾತೆಗೆ ಜಮಾ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾನು 1997 ರಿಂದ ಪಿರ್ಯಾದಿ ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿದ್ದು 2017 ರಲ್ಲಿ ಮ್ಯಾನೇಜರ್ ಆಗಿ ಪದೋನ್ನತಿ ಹೊಂದಿರುತ್ತೇನೆ. ನಾನು ಮ್ಯಾನೇಜರ್ ಆದ ನಂತರ ಬ್ಯಾಂಕಿನಲ್ಲಿ ಆಗಿರುವ ನಡಾವಳಿಗಳ ಬಗ್ಗೆ ನನಗೆ ಯಾವುದೇ ವಿಚಾರ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ.

4. ಆರೋಪಿ ಎಸ್ ಬಿ ಐ ಬ್ಯಾಂಕಿನ ಖಾತೆಗೆ ಸೇರಿದ ಚೆಕ್ಕನ್ನು ದಿನಾಂಕ 22-12-2017 ರಂದು ನೀಡಿರುತ್ತಾರೆ. ಆರೋಪಿ ಚೆಕ್ಕನ್ನು ನೀಡಿದ ಬಗ್ಗೆ ನಾವು ಬ್ಯಾಂಕಿನಲ್ಲಿ ಯಾವುದೇ ದಾಖಲೆಯನ್ನು ನಮೂದು ಮಾಡಿಕೊಂಡಿರುವುದಿಲ್ಲ. ದಿನಾಂಕ 22-12-2017 ರಂದು ಆರೋಪಿ ಚೆಕ್ಕನ್ನು ನೀಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಲ ಮರುಪಾವತಿಗಾಗಿ ಆರೋಪಿ ಚೆಕ್ಕನ್ನು ನೀಡಿರುತ್ತಾರೆ ಎಂದು ಸಾಕ್ಷಿ ಸ್ವತಃ ನುಡಿಯುತ್ತಾರೆ. ಆರೋಪಿ ಚೆಕ್ಕನ್ನು ನೀಡಿದಾಗ ಅದರ ಬಗ್ಗೆ ನಮೂದು ಮಾಡಿಕೊಂಡಿಲ್ಲ. ಆದರೆ ಅದನ್ನು ಬ್ಯಾಂಕಿಗೆ ನಗದೀಕರಣಗೊಳಿಲು ಸಲ್ಲಿಸುವ ಮೊದಲು ಅದರ ಬಗ್ಗೆ ನಮೂದು ಮಾಡಿಕೊಳ್ಳುತ್ತೇವೆ. ಈ ರೀತಿ ಚೆಕ್ಕನ್ನು ಓ ಬಿ ಸಿ ದಾಖಲೆಯನ್ನು ನಮೂದು ಮಾಡಿಕೊಂಡಿರುತ್ತೇವೆ. ಸದರಿ ಓ ಬಿ ಸಿ ದಾಖಲೆಯನ್ನು ನ್ಯಾಯಾಲಯದಲ್ಲಿ ಹಾಜರು ಮಾಡಿರುವುದಿಲ್ಲ.

5. ನಾವು ದಿನಾಂಕ 21-12-2017 ರಂದು ಸಾಲ ವಸೂಲಾತಿಗಾಗಿ ಹೋಗಿದ್ದು ಆರೋಪಿ ನಿಪಿ-1 ರ ದಿನಾಂಕ 22-12-2017 ರ ಚೆಕ್ಕನ್ನು ನೀಡಿರುತ್ತಾರೆ. ನಾವು ಸದರಿ ಚೆಕ್ಕನ್ನು ದಿನಾಂಕ 24-1-2018 ರಂದು

ಹಾಜರುಮಾಡಿರುತ್ತೇವೆ. ಅದೇ ದಿನ ಚೆಕ್ಕು ಅಮಾನ್ಯವಾಗಿ ನಮಗೆ ವಾಪಾಸು ನೀಡಿರುತ್ತಾರೆ. ದಿನಾಂಕ 29-1-2018 ರಂದು ನಾವು ನೋಟೀಸನ್ನು ನೀಡಿರುತ್ತೇವೆ. ಸದರಿ ನೋಟೀಸ್ ಆರೋಪಿಗೆ ಜಾರಿಯಾಗಿರುವುದಿಲ್ಲ. ವಿಳಾಸದಾರರು ವಿಳಾಸದಲ್ಲಿ ಇರುವುದಿಲ್ಲ ಎಂದು ವಾಪಾಸು ಬಂದಿರುತ್ತದೆ. ಆರೋಪಿಗೆ ನೋಟೀಸ್ ನೀಡಿದ ವಿಳಾಸದಲ್ಲಿ ಅವರು ಎಂದಿಗೂ ವಾಸ ಇರಲಿಲ್ಲ ಎಂದರೆ ಸರಿಯಲ್ಲ.

6. ನಾವು ಆರೋಪಿಗೆ ಸಾಲ ಮಂಜೂರು ಮಾಡುವ ಸಮಯದಲ್ಲಿ ಆತನಿಂದ ಒಂದು ಖಾಲಿ ಚೆಕ್ಕನ್ನು ಭದ್ರತೆಗಾಗಿ ಪಡೆದುಕೊಂಡಿದ್ದೆವು ಎಂದರೆ ಸರಿಯಲ್ಲ. ನಿಪಿ-1 ರಲ್ಲಿರುವ ಬರವಣಿಗೆ ಮತ್ತು ಸಹಿ ಆರೋಪಿಗೆ ಸೇರಿದ್ದಲ್ಲ ಎಂದರೆ ಸರಿಯಲ್ಲ. ನಿಪಿ-1 ರ ಚೆಕ್ಕನ್ನು ದುರ್ಬಳಕೆ ಮಾಡಿಕೊಂಡು ಅಕ್ರಮ ಲಾಭ ಹೊಂದುವ ಉದ್ದೇಶದಿಂದ ನಾವು ಸುಳ್ಳು ಪಿರ್ಯಾದನ್ನು ದಾಖಲಿಸಿ ಈಗ ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಅದೆ.

(ಪ್ರಸನ್ನ ಕುಮಾರ್ ಸಿ)
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.,ನ್ಯಾಯಾಲಯ ಹೊಸದುರ್ಗ.**